[2020] 5 S.C.R. 259

ಎಂ. ಎಚ್. ಉಮಾ ಮಹೇಶ್ವರಿ ಮತ್ತು ಇತರರು.

ವಿರುದ್ಧ

ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್ ಮತ್ತು ಇನ್ನೊಬ್ಬರು

(2020ರ ಸಿವಿಲ್ ಮೇಲ್ಮನವಿ ಸಂಖ್ಯೆ 2558)

ಜೂನ್ 12, 2020

[ಎನ್. ವಿ. ರಮಣಾ, ಆರ್. ಸುಭಾಷ್ ರೆಡ್ಡಿ ಮತ್ತು ಸೂರ್ಯ ಕಾಂತ್,
ನ್ಯಾಯಮೂರ್ತಿಗಳು]

ಮೋಟಾರು ವಾಹನಗಳ ಕಾಯ್ದೆ, 1988:

ಕಲಂ 166 - 50 ವರ್ಷದ ವ್ಯಕ್ತಿ ಮಾರಣಾಂತಿಕ ಅಪಘಾತ – ಪರಿಹಾರವನ್ನು ನೀಡುವಾಗ ನ್ಯಾಯಮಂಡಳಿಯು 13 ರ ಗುಣಕವನ್ನು ಅನ್ವಯಿಸಿ ಭವಿಷ್ಯದ ಸಂಭವನೀಯತೆ ಬಗ್ಗೆ 30 ಪ್ರತಿಶತವನ್ನು ನೀಡಿತು. ಉಚ್ಚ ನ್ಯಾಯಾಲಯವು ಭವಿಷ್ಯದ ಸಂಭವನೀಯತೆ ಬಗ್ಗೆ15 ಪ್ರತಿಶತವನ್ನು ನೀಡುವ ಮೂಲಕ ಪರಿಹಾರದ ಮೊತ್ತವನ್ನು ಕಡಿಮೆ ಮಾಡಿತು. ಆದಾಗ್ಯೂ, ಉಚ್ಚ ನ್ಯಾಯಾಲಯವು 13ರ ಗುಣಕವನ್ನು ಕಾಯ್ದುಕೊಂಡಿರುತ್ತೆ - ಉಚ್ಚ ನ್ಯಾಯಾಲಯವು 13ರ ಗುಣಕವನ್ನು ಕಾಯ್ದುಕೊಂಡಿರುವುದರಿಂದ, ಭವಿಷ್ಯದ ಸಂಭವನೀಯತೆ ಕುರಿತು 15 ಪ್ರತಿಶತವನ್ನು ನೀಡುವ ಮೂಲಕ ಪರಿಹಾರವನ್ನು ಕಡಿಮೆ ಮಾಡಿರುವುದು ಸಮರ್ಥನೀಯವಲ್ಲ. ನ್ಯಾಯಮಂಡಳಿಯು ನೀಡಿದ ಪರಿಹಾರವು ನ್ಯಾಯಯುತ ಮತ್ತು ಸಮಂಜಸವಾಗಿರುತ್ತೆ.

<u>ಮೇಲ್ಮನವಿಯನ್ನು ಪುರಸ್ಕರಿಸಿದ ನ್ಯಾಯಾಲಯವು, ತೀರ್ಮಾನಿಸಿರುವುದು:</u>

1. ನ್ಯಾಯಮಂಡಳಿಯು ಮೃತನ ವಯಸ್ಸನ್ನು 40 ರಿಂದ 50 ವರ್ಷ ವಯೋಮಾನದವರ ಗುಂಪಿಗೆ ಸೇರಿದ್ದಾರೆಂದು ತೀರ್ಮಾನಿಸಿದ್ದು, 13 ರ ಗುಣಕವನ್ನು

ಪರಿಹಾರ ಲೆಕ್ಕ ಹಾಕಲು ಅನ್ವಯಿಸಿತು. ಉಚ್ಚ ನ್ಯಾಯಾಲಯವು ಅಪಘಾತದ ದಿನಾಂಕದಂದು ಮೃತನ ವಯಸ್ಸು 50 ವರ್ಷ 3 ತಿಂಗಳು ಎಂದು ತೀರ್ಮಾನಿಸಿ ಆ ನೆಲೆಯಲ್ಲಿ 13ರ ಗುಣಕವನ್ನು ಕಾಯ್ದುಕೊಂಡಿದ್ದರೂ, ಭವಿಷ್ಯದ ಸಂಭವನೀಯತೆ ಕುರಿತಂತೆ ಪರಿಹಾರವನ್ನು ಲೆಕ್ಕ ಹಾಕುವಾಗ 30 ಶೇಕಡಾ ಬದಲು 15 ಶೇಕಡಾವನ್ನು ಅನ್ವಯಿಸಿ, ಪರಿಹಾರದ ಹಣವನ್ನು ಕಡಿಮೆ ಮಾಡಿರುತ್ತೆ. ನ್ಯಾಯಮಂಡಳಿಯು 13ರ ಗುಣಕವನ್ನು ಅನ್ವಯಿಸಿರುವ ಬಗ್ಗೆ ಉಚ್ಚ ನ್ಯಾಯಾಲಯವು ಮಧ್ಯಪ್ರವೇಶಿಸಿಲ್ಲ. ಮೃತನ ವಯಸ್ಸನ್ನು 40 ರಿಂದ 50 ವರ್ಷಗಳ ಗುಂಪಿಗೆ ಪರಿಗಣಿಸಿದಾಗ, ಉಚ್ಚ ನ್ಯಾಯಾಲಯವು ಭವಿಷ್ಯದ ಸಂಭವನೀಯತೆ ಕುರಿತು 30 ಶೇಕಡಾವನ್ನು ಪರಿಗಣಿಸದೇ ಕೇವಲ 15 ಶೇಕಡಾವನ್ನು ಪರಿಗಣಿಸಿರುವುದು ತಪ್ಪು ಆಗಿರುತ್ತೆ. 40 ರಿಂದ 50 ವರ್ಷ ವಯಸ್ಸಿನವರೆಂದು ಪರಿಗಣಿಸಿ, 13 ರ ಗುಣಕವನ್ನು ಉಚ್ಚ ನ್ಯಾಯಾಲಯವು ಕಾಯ್ದುಕೊಂಡಿರುವಾಗ ಭವಿಷ್ಯದ ಸಂಭವನೀಯತೆಗಾಗಿ 15 ಪ್ರತಿಶತವನ್ನು ಪರಿಗಣಿಸಿ ಪರಿಹಾರವನ್ನು ಕಡಿಮೆ ಮಾಡಲು ಯಾವುದೇ ಕಾರಣ ಅಥವಾ ಸಮರ್ಥನೆಯಿಲ್ಲ. [ಖಂಡಿಕೆ 8] [263-ಸಿ-ಎಫ್]

ಸರಳಾ ವರ್ಮಾ ಮತ್ತು ಇತರರು ವಿರುದ್ಧ ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಮತ್ತು ಇನ್ನೊಬ್ಬರು **(2009) 6 ಎಸ್.ಸಿ.ಸಿ. 121: [2009] 5 ಎಸ್.ಸಿ.ಆರ್ 1098 -** ಅನ್ನು ಅವಲಂಬಿಸಲಾಗಿದೆ.

2. ಮೃತನ ವಯಸ್ಸು 40 ರಿಂದ 50 ವರ್ಷ ವಯಸ್ಸಿನವರಾಗಿದ್ದರೆ, ಭವಿಷ್ಯದ ಸಂಭವನೀಯತೆಯ ನಿರೀಕ್ಷೆಗಳ ಸೇರ್ಪಡೆ 30 ಶೇಕಡಾ ಆಗಿರಬೇಕು. ಗುಣಕಗಳ ಅನ್ವಯಿಸುವಿಕೆಗಾಗಿ, ಮೃತನ ವಯಸ್ಸನ್ನು 40 ರಿಂದ 50 ವರ್ಷ ವಯೋಮಿತಿಯವರೆಂದು ಉಚ್ಚ ನ್ಯಾಯಾಲಯವು ಒಪ್ಪಿಕೊಂಡಿರುತ್ತೆ. ಈ ದೃಷ್ಟಿಯಿಂದ, ಭವಿಷ್ಯದ ಸಂಭವನೀಯತೆಯನ್ನು ಶೇಕಡಾ 15ಕ್ಕೆ ಮಾತ್ರ ಸೀಮಿತಗೊಳಿಸಿ ಪರಿಹಾರದ ಹಣವನ್ನು ಕಡಿಮೆ ಮಾಡಲು ಯಾವುದೇ ಕಾರಣವಿಲ್ಲ. 13ರ ಗುಣಕದ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಕಾಯ್ದುಕೊಂಡಿರುವುದನ್ನು ಯಾರೂ ಕೂಡಾ ಪ್ರಶ್ನಿಸಿಲ್ಲವಾದ್ದರಿಂದ ಭವಿಷ್ಯದ ಸಂಭನೀಯತೆಯ ಕುರಿತು ಅವಲಂಬನೆಯ ನಷ್ಟದಡಿ ಪರಿಹಾರವನ್ನು ಕಡಿಮೆ ಮಾಡಿರುವಲ್ಲಿ ಉಚ್ಚ

ನ್ಯಾಯಾಲಯವು ಎಡವಿರುತ್ತೆ. ಪ್ರೀತಿ ಮತ್ತು ವಾತ್ಸಲ್ಯದ ನಷ್ಟಕ್ಕಾಗಿ, ಸಹಯೋಗದ ನಷ್ಟಕ್ಕಾಗಿ ರೂ.1,00,000/- ಪರಿಹಾರವನ್ನು 1ನೇ ಎದುರುದಾರನಿಗೆ ಆದೇಶಿಸಿರುವಾಗ ಆಕೆ ಇನ್ನೊಂದು ಬಾರಿ ರೂ.1,00,000/- ವನ್ನು ಅದೇ ಕುರಿತು ಪಡೆದುಕೊಳ್ಳಲು ಅರ್ಹಳಲ್ಲ ಆದರೆ ಅದೇ ಸಮಯ ಮೇಲ್ಮನವಿದಾರರು ರೂ. 2,00,000/- ಗಳನ್ನು ಮೃತದೇಹದ ಸಾಗಣೆಗೆ ಮತ್ತು ಅಂತ್ಯ ಸಂಸ್ಕಾರಕ್ಕೆಂದು ಕೇಳಿದ್ದು ಆ ಬಗ್ಗೆ ಕೇವಲ ತಲಾ ರೂ.20,000/- ಮತ್ತು ರೂ.25,000/- ವನ್ನು ನೀಡಲಾಗಿದೆ. ಪ್ರಕರಣದ ವಸ್ತು ವಿಷಯ ಮತ್ತು ಸಂದರ್ಭಗಳನ್ನು ಪರಿಗಣಿಸಿ ಆ ರೂ.1,00,000/- ವನ್ನು ಆದೇಶಿಸಿರುವುದನ್ನು ಕೂಡ ಉಚ್ಚ ನ್ಯಾಯಾಲಯವು ಕಡಿಮೆ ಮಾಡಬಾರದಿತ್ತು. ಆದ್ದರಿಂದ, ನ್ಯಾಯಮಂಡಳಿಯು ನೀಡಿದ ಪರಿಹಾರವು ಸಮಂಜಸವಾಗಿದೆ ಮತ್ತು ಯಾವುದೇ ಸೂಕ್ತ ಆಧಾರಗಳಿಲ್ಲದೆ ಉಚ್ಚ ನ್ಯಾಯಾಲಯವು ಅದರಲ್ಲಿ ಮಧ್ಯಪ್ರವೇಶಿಸಿದೆ. [ಖಂಡಿಕೆ 8 ಮತ್ತು 9] [263-ಜಿ-ಎಚ್; 264-ಎ-ಡಿ]

ನ್ಯಾಷನಲ್ ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್ ವಿರುದ್ಧ ಪ್ರಣಯ್ ಸೇಥಿ ಮತ್ತು ಇತರರು (2017) 16 ಎಸ್.ಸಿ.ಸಿ. 680: [2017] 13 ಎಸ್. ಸಿ. ಆರ್. 100 ಅನ್ನು ಅನುಸರಿಸಲಾಗಿದೆ.

ಪ್ರಕರಣ ಕಾನೂನು ಉಲ್ಲೇಖ

[2009] 5 ಎಸ್.ಸಿ.ಆರ್. 1098 ಪ್ಯಾರ 8ನ್ನು ಅವಲಂಬಿಸಿದೆ.

[2017] 13 ಎಸ್. ಸಿ.ಆರ್. 100 ಪ್ಯಾರ 8ನ್ನು ಅನುಸರಿಸಲಾಗಿದೆ.

ದಿವಾಣಿ ಮೇಲ್ಮನವಿ ಪ್ರಾಧಿಕಾರ: 2020ರ ಸಿವಿಲ್ ಮೇಲ್ಮನವಿ ಸಂಖ್ಯೆ: 2558.

ಕರ್ನಾಟಕ ಉಚ್ಚ ನ್ಯಾಯಾಲಯವು ಎಂ.ಎಫ್.ಎ. 4903/2016 (ಎಂ.ವಿ.-ಡಿ) ರಲ್ಲಿ ದಿನಾಂಕ 20.07.2016 ರಂದು ಮಾಡಿರುವ ಆದೇಶದಿಂದ ಉದ್ಭವಿಸಿರುತ್ತೆ.

ಶೇಖರ್ ಜಿ. ದೇವಾಸ, ಮನೀಶ್ ತಿವಾರಿ, ಲವ ಕುಮಾರ್ ರವರು ಮೆಸರ್ಸ್. ದೇವಾಸ & ಕಂಪನಿ, ಕುಮಾರಿ. ನೀರಜಾ ಸಚ್ದೇವಾ, ಯಶ್ ಪಾಲ್ ಧಿಂಗ್ರಾ ವಕೀಲರುಗಳು ಹಾಜರಾದ ಪಕ್ಷಗಾರರಿಗೆ.

ನ್ಯಾಯಾಲಯದ ತೀರ್ಪನ್ನು ನೀಡಿದವರು:

ಆರ್. ಸುಭಾಷ್ ರೆಡ್ಡಿ, ನ್ಯಾಯಮೂರ್ತಿಗಳು.

1. ಅನುಮತಿ ನೀಡಲಾಗಿದೆ.

2. ಮೋಟಾರು ವಾಹನ ಕಾಯ್ದೆ, 1988ರ ಕಲಂ.166ರ ಅಡಿಯಲ್ಲಿ (ಸಂಕ್ಷಿಪ್ತವಾಗಿ, 'ಕಾಯ್ದೆ') ಮೋಟಾರು ಅಪಘಾತ ಹಕ್ಕುಗಳ ನ್ಯಾಯಮಂಡಳಿ-VI ಮತ್ತು III ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರುರು, ಮಂಗಳೂರು, ಡಿ. ಕೆ. (ಸಂಕ್ಷಿಪ್ತವಾಗಿ, 'ನ್ಯಾಯಮಂಡಳಿ') ಮುಂದೆ ಇದ್ದ ಕ್ಲೇಮು ಅರ್ಜಿ ಎಂ.ವಿ.ಸಿ. ಸಂಖ್ಯೆ1639/2012 ರ ವಿರುಧ್ದ ಬೆಂಗಳೂರಿನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ಮೊದಲ ಮೇಲ್ಮನವಿ ಎಂ.ಎಫ್.ಎ. ಸಂಖ್ಯೆ 4903/2016ರಲ್ಲಿ ದಿನಾಂಕ 20.07.2017ರಂದು ನೀಡಿದ ತೀರ್ಪಿನಿಂದ ಬಾಧಿತರಾಗಿ ಹಕ್ಕು ಸಾಧಿಸಲು ಈ ಸಿವಿಲ್ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

3. ಸಂಕ್ಷಿಪ್ತವಾಗಿ ಅಗತ್ಯವಾದ ಸಂಗತಿಗಳು ಈ ಕೆಳಗಿನಂತಿವೆ:

ಮೃತ ಎಸ್. ಟಿ. ದೇವರಾಜು ಅವರು ಮೊದಲ ಮೇಲ್ಮನವಿದಾರರ ಪತಿಯಾಗಿದ್ದರು ಮತ್ತು 2ನೇ ಹಾಗೂ 3ನೇ ಮೇಲ್ಮನವಿದಾರರ ತಂದೆಯಾಗಿದ್ದರು. 16.07.2012 ರಂದು ಟಾಟಾ ಇಂಡಿಗೊ ಮಾಂಝಾ ನೋಂದಣಿ ಸಂಖ್ಯೆ.ಕೆ.ಎ.19-ಎಂ.ಸಿ.-5879 ನ ಕಾರಿನಲ್ಲಿ ರಾಯಚೂರಿಗೆ ಪ್ರಯಾಣಿಸುತ್ತಿದ್ದಾಗ ಕಾರು ಅಪಘಾತಕ್ಕೆ ಒಳಗಾಯಿತು. ದೇವರಾಜು ಗಂಭೀರವಾಗಿ ಗಾಯಗೊಂಡು ನಂತರ ನಿಧನರಾದರು. ಮೃತ ದೇವರಾಜು ಅವರು ಸಂಬಂಧಿತ ಸಮಯದಲ್ಲಿ ರಾಯಚೂರು ಪುರಸಭೆಯ ಆಯುಕ್ತರಾಗಿ ಕೆಲಸ ಮಾಡುತ್ತಿದ್ದರು.

4. ವಾಹನದ ಚಾಲಕನ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆ ಎಂದು ಆರೋಪಿಸಿರುವ ಮೇಲ್ಮನವಿದಾರರು, ಕಾಯ್ದೆಯ ಕಲಂ.166ರ ಅಡಿಯಲ್ಲಿ ಕ್ಲೈಮ್ ಅರ್ಜಿ ಸಲ್ಲಿಸಿದ್ದು, 12 ಪ್ರತಿಶತ ಬಡ್ಡಿ ಸಹಿತವಾಗಿ

ಪರಿಹಾರ ರೂ2,00,00,000/- ನೀಡಬೇಕೆಂದು ಕೋರಿಕೊಂಡಿದ್ದರು. ಮೇಲ್ಮನವಿದಾರರ ಪ್ರಕರಣವೇನೆಂದರೆ, ಮೃತರು ಮಾಸಿಕ ₹55,000/- ವೇತನವನ್ನು ಪಡೆಯುತ್ತಿದ್ದರು ಮತ್ತು ಅವರು ಸಾರ್ವಜನಿಕ ಸೇವಾ ಆಯೋಗದ ಮೂಲಕ ಆಯ್ಕೆಯಾದ ಕೆ.ಜಿ.ಎಸ್. ಕೇಡರ್ ಅಧಿಕಾರಿಯಾಗಿದ್ದರು. ಮೃತರ ಅಕಾಲಿಕ ಮರಣದಿಂದಾಗಿ, ಮೇಲ್ಮನವಿದಾರರು ಅವಲಂಬನೆಯನ್ನು ಕಳೆದುಕೊಂಡಿದ್ದಾರೆ ಮತ್ತು ಮೃತರು ಉಜ್ವಲ ಭವಿಷ್ಯವನ್ನು ಹೊಂದಿದ್ದರೆಂದು ಪ್ರತಿಪಾದಿಸಿದ್ದಾರೆ. ಎದುರುದಾರರು ಲಿಖಿತ ತಕರಾರು ಸಲ್ಲಿಸುವ ಮೂಲಕ ಈ ಅರ್ಜಿಯನ್ನು ವಿರೋಧಿಸಿದರು. ಮೇಲ್ಮನವಿದಾರರು ನ್ಯಾಯಮಂಡಳಿಯ ಮುಂದೆ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಮಂಡಿಸಿದ್ದಾರೆ. ಮೊದಲ ಮೇಲ್ಮನವಿದಾರನನ್ನು ಪಿ.ಡಬ್ಲ್ಯೂ.-1 ಎಂದು ಮತ್ತು ಅವರ ಪರವಾಗಿ ಇತರ ಇಬ್ಬರು ಸಾಕ್ಷಿಗಳನ್ನು ಪಿ.ಡಬ್ಲ್ಯೂ.-2 ಮತ್ತು ಪಿ.ಡಬ್ಲ್ಯೂ.-3 ಎಂದು ಸಾಕ್ಷ್ಯಹೇಳಿಕೆ ಪಡೆದುಕೊಳ್ಳಲಾಯಿತು ಮತ್ತು ದಾಖಲೆಗಳನ್ನು ನಿಶಾನೆ ಪಿ.1 ರಿಂದ ಪಿ.24 ಎಂದು ಗುರುತಿಸಲಾಯಿತು. ಪ್ರತಿವಾದಿಗಳು ಪರವಾಗಿ, ಯಾವುದೇ ಮೌಖಿಕ ಸಾಕ್ಷ್ಯಹೇಳಿಕೆ ಒದಗಿಸಿಲ್ಲ ಮತ್ತು ಒಪ್ಪಿಗೆಯೊಂದಿಗೆ ವಿಮೆ ಪಾಲಿಸಿಯ ಪ್ರತಿಯನ್ನು ಮಾತ್ರ ನಿಶಾನೆಯಾಗಿ ಗುರುತಿಸಲಾಗಿದೆ.

5. ನ್ಯಾಯಮಂಡಳಿಯು, ಕಡತದಲ್ಲಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಪರಿಗಣಿಸಿ, ವಾಹನದ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆಯೆಂದು ನಿರ್ಣಯಿಸಿ ಪರಿಹಾರವನ್ನು ನಿಗದಿಪಡಿಸಲು ಮುಂದಾಯಿತು. ಕಡತದಲ್ಲಿರುವ ಸಾಕ್ಷ್ಯಗಳನ್ನು ಪರಿಗಣಿಸಿ ನ್ಯಾಯಾಧಿಕರಣವು, ಮೃತ ವ್ಯಕ್ತಿಯ ವೇತನದ ಆದಾಯ ರೂ.50,463/- ಗಳೆಂದು ಪರಿಗಣಿಸಿ, ಸರಳಾ ವರ್ಮಾ ಮತ್ತು ದೆಹಲಿ ಸಾರಿಗೆ ನಿಗಮ ವ ಇತರರು {(2009) 6 ಎಸ್.ಸಿ.ಸಿ. 121} ಪ್ರಕರಣದಲ್ಲಿ ನಿಗದಿಪಡಿಸಿದ ತತ್ವಗಳನ್ನು ಅನ್ವಯಿಸುವ ಮೂಲಕ 13 ರ ಗುಣಕವನ್ನು ಅನ್ವಯಿಸಿತು ಮತ್ತು ಭವಿಷ್ಯದ ಸಂಭನೀಯತೆಯ ಕುರಿತು 30 ಪ್ರತಿಶತವನ್ನು ಪರಿಗಣಿಸಿ ಪರಿಹಾರ ರೂ.1,02,33,912/- ನ್ನು ನಿಗದಿಪಡಿಸಿತು. ಆ ಮೊತ್ತದಲ್ಲಿ ವೈಯಕ್ತಿಕ ವೆಚ್ಚದ ಮೂರನೇ ಒಂದು ಭಾಗವನ್ನು ಮತ್ತು ಆದಾಯ ತೆರಿಗೆಗೆ ಶೇಕಡಾ

10ರಷ್ಟನ್ನು ಕಡಿತಗೊಳಿಸುವ ಮೂಲಕ, ಮೇಲ್ಮನವಿದಾರ-ಹಕ್ಕುದಾರರು ಅವಲಂಬನೆಯ ನಷ್ಟ Rs.61,40,347.20/- ಪರಿಹಾರಕ್ಕೆ ಅರ್ಹರಾಗಿದ್ದಾರೆ ಎಂದು ನ್ಯಾಯಮಂಡಳಿಯು ಅಭಿಪ್ರಾಯಪಟ್ಟಿದೆ. ಮೊದಲ ಮೇಲ್ಮನವಿದಾರದಾರನಿಗೆ ಸಹಯೋಗದ ನಷ್ಟಕ್ಕೆ ಸಂಬಂಧಿಸಿದಂತೆ ರೂ.1,00,000/- ಮತ್ತು ಪ್ರೀತಿ ಮತ್ತು ವಾತ್ಸಲ್ಯದ ನಷ್ಟ ಸಂಬಂಧಿಸಿದಂತೆ ಎಲ್ಲಾ ಮೇಲ್ಮನವಿದಾರದಾರರಿಗೆ ರೂ.3,00,000/- ಮತ್ತು ಅಂತ್ಯಕ್ರಿಯೆಯ ವೆಚ್ಚಗಳಿಗೆ ಸಂಬಂಧಿಸಿದಂತೆ ಕೇಳಿದ ರೂ.2,00,000/- ಮೊತ್ತದ ಕುರಿತು ರೂ. 20,000/- ವನ್ನು ನೀಡುವ ಮೂಲಕ, ನ್ಯಾಯಮಂಡಳಿಯು ಒಟ್ಟು ಪರಿಹಾರವಾಗಿ ರೂ. Rs.65,60,347.20/- ನ್ನು ನೀಡಿದೆ.

6. ನ್ಯಾಯಮಂಡಳಿಯ ತೀರ್ಪಿನ ಬಗ್ಗೆ ಅಸಮಾಧಾನಗೊಂಡ ಮೊದಲ ಪ್ರತಿವಾದಿಯಾದ ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್ ರವರು ಬೆಂಗಳೂರಿನ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಮಿಸಲೇನಿಯಸ್ ಮೊದಲ ಮೇಲ್ಮನವಿ No.4903/2016 ನ್ನು ದಾಖಲಿಸಿತು. ನ್ಯಾಯಾಧಿಕರಣದ ತೀರ್ಪನ್ನು ಮುಖ್ಯವಾಗಿ ಮೂರು ಕಾರಣಗಳ ಮೇಲೆ ಹೈಕೋರ್ಟಿನ ಮುಂದೆ ಪ್ರಶ್ನಿಸಲಾಯಿತು, ಅವುಗಳೆಂದರೆ, ಮೃತ ವ್ಯಕ್ತಿಯು 50 ವರ್ಷಕ್ಕಿಂತ ಮೇಲ್ಪಟ್ಟವನಾಗಿದ್ದರಿಂದ, ನ್ಯಾಯಾಧಿಕರಣವು ಭವಿಷ್ಯದ ಸಂಭನೀಯತೆಯನ್ನು ಶೇಕಡಾ 30ರಷ್ಟು ನಿಗದಿಪಡಿಸುವಲ್ಲಿ ತಪ್ಪು ಮಾಡಿದೆ; ಎರಡನೆಯದಾಗಿ, ಮೊದಲ ಮೇಲ್ಮನವಿದಾರರು ಕುಟುಂಬ ಪಿಂಚಣಿಯನ್ನು ಪಡೆಯುತ್ತಿರುವುದರಿಂದ, ಅವಲಂಬನೆಯ ನಷ್ಟ ಲೆಕ್ಕ ಹಾಕುವಾಗ ಆ ಹಣವನ್ನು ಕಡಿತಗೊಳಿಸಬೇಕಾಗಿತ್ತು ಎಂಬುದು ಮೊದಲ ಪ್ರತಿವಾದಿಯ ಮಂಡನೆಯಾಗಿತ್ತು; ಮತ್ತು ಮೂರನೆಯದಾಗಿ, ಸಹಯೋಗದ ನಷ್ಟದ ಪರಿಹಾರಕ್ಕೆ ಸಂಬಂಧಿಸಿದಂತೆ ಮೊದಲ ಮೇಲ್ಮನವಿದಾರನಿಗೆ ರೂ.1,00,000/- ವನ್ನು ನೀಡಿದ ನ್ಯಾಯಮಂಡಳಿಯು ಎಲ್ಲಾ ಮೇಲ್ಮನವಿದಾರರಿಗೆ 'ಪ್ರೀತಿ ಮತ್ತು ವಾತ್ಸಲ್ಯದ ನಷ್ಟ' ಎಂಬ ಶೀರ್ಷಿಕೆಗೆ ಸಂಬಂಧಿಸಿದಂತೆ ರೂ. 3,00,000/- ನೀಡಿರುವುದು ಸರಿಯಲ್ಲವೆಂದು ಮಂಡಿಸಿರುತ್ತಾರೆ. ಉಚ್ಚ ನ್ಯಾಯಾಲಯವು ಅಪಘಾತದ ದಿನಾಂಕದಂದು ಮೃತರಿಗೆ 50 ವರ್ಷ 3 ತಿಂಗಳು ವಯಸ್ಸಾಗಿತ್ತು ಎಂಬ ಆಧಾರದ ಮೇಲೆ, ಮೇಲ್ಮನವಿದಾರರು ಅವಲಂಬನೆ ನಷ್ಟ

ಕಾರಣದ ಪರಿಹಾರ ಪಡೆಯಲು 30% ಬದಲು 15% ಕ್ಕೆ ಅರ್ಹರಾಗಿದ್ದಾರೆ ಎಂದು ತೀರ್ಮಾನಕ್ಕೆ ಬಂದಿದೆ. ಇದಲ್ಲದೆ, ಮೊದಲ ಮೇಲ್ಮನವಿದಾರದಾರನಿಗೆ ಸಹಯೋಗದ ನಷ್ಟ ಸಂಬಂಧಿಸಿದಂತೆ ರೂ. 1,00,000/- ಮೊತ್ತವನ್ನು ನೀಡಿರುವ ನ್ಯಾಯಮಂಡಳಿಯು ಮೊದಲ ಮೇಲ್ಮನವಿದಾರದಾರಳಿಗೆ 'ಪ್ರೀತಿ ಮತ್ತು ವಾತ್ಸಲ್ಯದ ನಷ್ಟ' ಎಂಬ ಶೀರ್ಷಿಕೆಗೆ ಸಂಬಂಧಿಸಿದಂತೆ ರೂ.1,00,000/- ಅನ್ನು ನೀಡುವ ಮೂಲಕ ತಪ್ಪು ಮಾಡಿದೆ ಎಂದು ನಿರ್ಣಯಿಸಿದೆ. ಮೇಲಿನ ತೀರ್ಮಾನಗಳೊಂದಿಗೆ, ಉಚ್ಚ ನ್ಯಾಯಾಲಯವು ಮೇಲ್ಮನವಿದಾರರಿಗೆ ಪಾವತಿಸಬೇಕಾದ ಪರಿಹಾರವನ್ನು Rs.57,78,480/- ಎಂದು; ಅಂದರೆ, Rs.54,33,480/- ಅವಲಂಬನೆ ನಷ್ಟ, ರೂ.1,00,000/- ಸಹಯೋಗದ ನಷ್ಟ, ರೂ. 2,00,000/-ಮಕ್ಕಳಿಗೆ ಪ್ರೀತಿ ಮತ್ತು ವಾತ್ಸಲ್ಯ, Rs.25,000/- ಅಂತ್ಯಕ್ರಿಯೆಯ ವೆಚ್ಚಗಳು ಮತ್ತು ಮೃತದೇಹದ ಸಾಗಣೆಗೆ ರೂ.20,000/- ಎಂದು ಮರು ಲೆಕ್ಕಾಚಾರ ಮಾಡಿತು.

7. ಮೇಲ್ಮನವಿದಾರರ ಪರವಾಗಿ ಹಾಜರಾದ ವಿದ್ವಾಂಸ ವಕೀಲ ಶ್ರೀ ಶೇಖರ್ ದೇವಾಸ ಮತ್ತು 1ನೇ ಪ್ರತಿವಾದಿಯಾದ - ಇನ್ಶೂರೆನ್ಸ್ ಕಂಪನಿಯ ಪರವಾಗಿ ಹಾಜರಾದ ವಿದ್ವಾಂಸೆ ವಕೀಲಾದ ಶ್ರೀಮತಿ ನೀರಜಾ ಸಚ್ದೇವ ಅವರನ್ನು ನಾವು ಆಲಿಸಿದ್ದೇವೆ ಮತ್ತು ದಾಖಲೆಯಲ್ಲಿರುವ ವಸ್ತು-ವಿಷಯಗಳನ್ನು ಪರಿಶೀಲಿಸಿದ್ದೇವೆ. 2ನೇ ಪ್ರತಿವಾದಿಗೆ ಸೂಚನೆ ನೀಡಲಾಗಿದ್ದರೂ, ಆತನನ್ನು ಯಾರೂ ಪ್ರತಿನಿಧಿಸಿಲ್ಲ.

8. ನ್ಯಾಯಾಧಿಕರಣವು, ಮೃತರು 40 ರಿಂದ 50 ವರ್ಷ ವಯಸ್ಸಿನವರಾಗಿದ್ದಾರೆ ಎಂಬ ನಿರ್ಣಯ ದಾಖಲಿಸುವ ಮೂಲಕ, ಪರಿಹಾರವನ್ನು ಲೆಕ್ಕ ಹಾಕುವಾಗ 13 ರ ಗುಣಕವನ್ನು ಅನ್ವಯಿಸಿತು. ಕೌತುಕವೆಂದರೆ, ಸರಳಾ ವರ್ಮಾ ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪಿನ ಪ್ರಕಾರ 13ರ ಗುಣಕವನ್ನು ಸಮರ್ಥಿಸಿಕೊಂಡ ಹೈಕೋರ್ಟ್, ಅಪಘಾತದ ದಿನಾಂಕದಂದು ಮೃತರುರಿಗೆ 50 ವರ್ಷ 3 ತಿಂಗಳು ವಯಸ್ಸಾಗಿತ್ತು ಎಂಬ ಆಧಾರದ ಮೇಲೆ ಭವಿಷ್ಯದ ಸಂಭವನೀಯತೆಯಡಿ ಶೇಕಡಾ 30ರ ಬದಲು ಶೇಕಡಾ 15ನ್ನು ನೀಡುವ ಮೂಲಕ ಪರಿಹಾರವನ್ನು ಕಡಿಮೆ ಮಾಡಿದೆ.

ನ್ಯಾಯಮಂಡಳಿಯು 13ರ ಗುಣಕವನ್ನು ಅನ್ವಯಿಸಿದ ಕುರಿತು ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯವು ಮಧ್ಯಪ್ರವೇಶಿಸಿಲ್ಲ. ಮೃತರರ ವಯಸ್ಸನ್ನು 40 ರಿಂದ 50 ವರ್ಷಗಳ ಗುಂಪಿಗೆ ಪರಿಗಣಿಸಿದಾಗ, ಭವಿಷ್ಯದ ಸಂಭವನೀಯತೆಯ ಬಗ್ಗೆ 30 ಪ್ರತಿಶತದ ಬದಲು ಕೇವಲ 15 ಪ್ರತಿಶತವನ್ನು ನೀಡುವಲ್ಲಿ ಹೈಕೋರ್ಟ್ ತಪ್ಪು ಮಾಡಿದೆ ಎಂದು ನಾವು ಭಾವಿಸುತ್ತೇವೆ. ಈ ನ್ಯಾಯಾಲಯದ ತೀರ್ಪುಗಳ ಪ್ರಕಾರ ಪ್ರಾಥಮಿಕವಾಗಿ ವಯೋಮಾನವನ್ನು ಪರಿಗಣಿಸಬೇಕು. 40 ರಿಂದ 50 ವರ್ಷ ವಯಸ್ಸಿನವರನ್ನು ಪರಿಗಣಿಸಿ, 13 ರ ಗುಣಕವನ್ನು ಹೈಕೋರ್ಟ್ ಕಾಯ್ದುಕೊಂಡಾಗ, ಭವಿಷ್ಯದ ಸಂಭವನೀಯತೆಯ ಬಗ್ಗೆ 15 ಪ್ರತಿಶತವನ್ನು ನೀಡುವ ಮೂಲಕ ಪರಿಹಾರವನ್ನು ಕಡಿಮೆ ಮಾಡಲು ಯಾವುದೇ ಕಾರಣ ಅಥವಾ ಸಮರ್ಥನೆಯಿಲ್ಲ. ಒಂದನೇ ಪ್ರತಿವಾದಿ ಪರವಾಗಿ ಹಾಜರಾದ ವಿದಾ ಂಸ ವಕೀಲರು ವಾದಿಸುತ್ತಾ ನ್ಯಾಷನಲ್ ವಿಮೆ ಕಂಪನಿ ಲಿಮಿಟೆಡ್ ವಿರುದ್ಧ ಪ್ರಣಯ್ ಸೇಥಿ ಮತ್ತು ಇತರರು {(2017) 16 ಎಸ್.ಸಿ.ಸಿ. 680} ಪ್ರಕರಣದಲ್ಲಿ ಈ ನ್ಯಾಯಾಲಯದ ಸಾಂವಿಧಾನಿಕ ಪೀಠದ ತೀರ್ಪಿನ ಪ್ರಕಾರ ಭವಿಷ್ಯದ ನಿರೀಕ್ಷೆಗಳ ಪರಿಹಾರವನ್ನು ನೀಡಲಾಗಿದೆ ಎಂದು ವಾದಿಸಿದ್ದಾರೆ, ಆದರೆ ಅದೇ ಸಮಯದಲ್ಲಿ 59.3ನೇ ಖಂಡಿಕೆಯಲ್ಲಿನ ಅದೇ ತೀರ್ಪಿನಲ್ಲಿ ಭವಿಷ್ಯದ ನಿರೀಕ್ಷೆಗಳ ಅನುದಾನ ಪರಿಗಣಿಸುವಾಗ, ಈ ನ್ಯಾಯಾಲಯವು ನಿರ್ದಿಷ್ಟವಾಗಿ ಮೃತರುರ ವಯಸ್ಸು 40 ರಿಂದ 50 ವರ್ಷ ವಯಸ್ಸಿನವರಾಗಿದ್ದರೆ ಶೇಕಡಾ 30ರಷ್ಟು ಹೆಚ್ಚುವರಿಯಾಗಿರಬೇಕು ಎಂದು ಹೇಳಿದೆ ಎಂಬುದು ಗಮನಾರ್ಹ. ಗುಣಕದ ಅನ್ವಯಿಸುವಿಕೆಗಾಗಿ ಉಚ್ಚ ನ್ಯಾಯಾಲಯವು ಮೃತರು 40 ರಿಂದ 50 ವರ್ಷದೊಳಗಿನ ವಯೋಮಾನದವರೆಂದು ಅಂಗೀಕರಿಸಿದೆ. ಈ ವಿಷಯದ ದೃಷ್ಟಿಯಿಂದ, ಭವಿಷ್ಯದ ಸಂಭವನೀಯತೆಯ ಬಗ್ಗೆ ಶೇಕಡಾ 15ಕ್ಕೆ ಸೀಮಿತಗೊಳಿಸಿ ಪರಿಹಾರವನ್ನು ಕಡಿಮೆ ಮಾಡಲು ಯಾವುದೇ ಕಾರಣವಿಲ್ಲ. 13ರ ಗುಣಕದ ಅನ್ವಯಿಸುವಿಕೆಯನ್ನು ಸಮರ್ಥಿಸಿಕೊಂಡಿರುವ ಉಚ್ಚ ನ್ಯಾಯಾಲಯವು, ದಾಖಲಿಸಿದ ತೀರ್ಮಾನಗಳಿಗೆ ಯಾವುದೇ ಸವಾಲಿನ ಅನುಪಸ್ಥಿತಿಯಲ್ಲಿ ಅವಲಂಬನೆಯ ನಷ್ಟ ಕಾರಣದಿಂದಾಗಿ ಪರಿಹಾರವನ್ನು ಕಡಿಮೆ ಮಾಡುವಲ್ಲಿ ತಪ್ಪು ಮಾಡಿದೆ ಎಂದು ನಾವು ಭಾವಿಸುತ್ತೇವೆ. ಸಹಯೋಗದ ನಷ್ಟ ಕಾರಣಕ್ಕಾಗಿ ಮೊದಲ ಮೇಲ್ಮನವಿದಾರನಿಗೆ ರೂ.1,00,000/- ಪರಿಹಾರವನ್ನು ನೀಡಿದಾಗ, ಪ್ರೀತಿ

ಮತ್ತು ವಾತ್ಸಲ್ಯದ ನಷ್ಟಕ್ಕಾಗಿ ಆಕೆಗೆ ಇನ್ನೂ ರೂ.1,00,000/- ಪರಿಹಾರಕ್ಕೆ ಅರ್ಹತೆ ಇರಲಿಲ್ಲ. ಆದರೆ ಅದೇ ಸಮಯದಲ್ಲಿ, ಮೇಲ್ಮನವಿದಾರದಾರರು ಮೃತ ದೇಹವನ್ನು ಸಾಗಿಸಲು ಮತ್ತು ಅಂತ್ಯಕ್ರಿಯೆಯ ವೆಚ್ಚಗಳಿಗಾಗಿ ರೂ.2,00,000/- ಪರಿಹಾರವನ್ನು ಕೋರಿದ್ದರೂ, ಆ ಶೀರ್ಷಿಕೆಯಡಿ ಕೇವಲ ರೂ.20,000/- ಮತ್ತು ರೂ.25,000/- ಮೊತ್ತವನ್ನು ಮಾತ್ರ ನೀಡಲಾಯಿತು. ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನು ಗಣನೆಗೆ ತೆಗೆದುಕೊಂಡು, ಅಂತಹ ಅನುದಾನವಾದ ರೂ. 1,00,000/- ಅನ್ನು ಸಹ ಉಚ್ಚ ನ್ಯಾಯಾಲಯವು ಕಡಿತಗೊಳಿಸಬಾರದಿತ್ತು ಎಂಬುದು ನಮ್ಮ ಅಭಿಪ್ರಾಯವಾಗಿದೆ.

9. ಮೇಲಿನ ಕಾರಣಗಳಿಗಾಗಿ, ನ್ಯಾಯಮಂಡಳಿಯು ನೀಡಿದ ಪರಿಹಾರವು ನ್ಯಾಯಯುತ ಮತ್ತು ಸಮಂಜಸವಾಗಿದೆ ಹಾಗೂ ಯಾವುದೇ ಮಾನ್ಯವಾದ ಆಧಾರಗಳಿಲ್ಲದೆ ಉಚ್ಚನ್ಯಾಯಾಲಯವು ಅದರಲ್ಲಿ ಹಸ್ತಕ್ಷೇಪ ಮಾಡಿದೆ ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ, ಆದ್ದರಿಂದ, ನಾವು ಈ ಮೇಲ್ಮನವಿಯನ್ನು ಪುರಸ್ಕರಿಸುತ್ತೇವೆ ಮತ್ತು ದಿನಾಂಕ 20.07.2016ರಂದು ಮಿಸಲೇನಿಯಸ್ ಮೊದಲ ಮೇಲ್ಮನವಿ No.4903/2016 (ಎಂ.ಎ.-ಡಿ) ದಲ್ಲಿ ಬೆಂಗಳೂರಿನ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ತಳ್ಳಿಹಾಕುತ್ತೇವೆ ಮತ್ತು ಮೋಟಾರು ಅಪಘಾತ ಹಕ್ಕುಗಳ ನ್ಯಾಯಮಂಡಳಿ-VI ಮತ್ತು III ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರುರು, ಮಂಗಳೂರು ರವರು ಎಂ. ಎ. ಸಿ.1639/2012 ರಲ್ಲಿ ದಿನಾಂಕ 29.09.2015 ರಂದು ಮಾಡಿರುವ ತೀರ್ಪನ್ನು ಮರುಸ್ಥಾಪಿಸುತ್ತೇವೆ. ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲ.

ಮೇಲ್ಮನವಿ ಪುರಸ್ಕರಿಸಲಾಗಿದೆ.

****